# ಶ್ರೀಮಾತೆಯವರ ತೀರ್ಥಯಾತ್ರೆಗಳು

ಇಂದ್ರಾಣಿ ಬಾಲು

ಶ್ರೀಮಾತೆಯವರ ಇಡೀ ಬದುಕು ಶ್ರೀರಾಮಕೃಷ್ಣರಿಗೆ ಸಮರ್ಪಿತವಾದ ಪರಿಶುದ್ಧ ಜೀವನ. ಶ್ರೀಮಾತೆಯವರು ತಮ್ಮ ಜೀವಿತಕಾಲದಲ್ಲಿ ಹಲವಾರು ತೀರ್ಥಕ್ಷೇತ್ರಗಳಿಗೆ ಹೋಗಿಬಂದರು. ಅವುಗಳನ್ನು ತಮ್ಮ ಸಾನ್ನಿಧ್ಯದಿಂದ ಪಾವನಗೊಳಿಸಿದರು. ಇವುಗಳ ಸಂಕ್ಷಿಪ್ತ ವಿವರಣೆಯನ್ನು ಮಾಡಿಕೊಟ್ಟಿರುವ ಲೇಖಕಿ, ಬೆಂಗಳೂರಿನ ಶ್ರೀಶಾರದಾಮಠದ ಭಕ್ತರು.

ಅವತಾರಪುರುಷರಿಗೆ ತೀರ್ಥಯಾತ್ರೆಯ ಆವಶ್ಯಕತೆಯಾದರೂ ಏನಿದೆ? ಇಂತಹ ಅವತಾರಪುರುಷರು ತಮ್ಮ ಆಧ್ಯಾತ್ಮಿಕ ಶಕ್ತಿ ಮತ್ತು ಸಾನ್ನಿಧ್ಯದಿಂದ ಪವಿತ್ರಸ್ಥಳಗಳನ್ನು ಮತ್ತೂ ಪವಿತ್ರಗೊಳಿಸುತ್ತಾರೆ. ಅವರಿಗೆ ಆಯಾ ತೀರ್ಥಕ್ಷೇತ್ರಗಳಿಗೆ ಸಂಬಂಧಿಸಿದ ತಮ್ಮ ಹಿಂದಿನ ಜನ್ಮಗಳ ನೆನಪುಗಳು ಬರುತ್ತವೆ. ತಮ್ಮ ಸಾನ್ನಿಧ್ಯದ ಮೂಲಕ ಅವರು ಅಲ್ಲಿ ಈಗಾಗಲೇ ಇರುವ ಭಗವಂತನ ದಿವ್ಯಸಾನ್ನಿಧ್ಯವನ್ನು ಮತ್ತೂ ನವೀಕರಿಸುತ್ತಾರೆ. ಇದರಿಂದಾಗಿ ಭಕ್ತಾದಿಗಳಿಗೆ ಆ ಸ್ಥಳಗಳಲ್ಲಿ, ದಿವ್ಯಸಾನ್ನಿಧ್ಯವು ಸುಲಭವಾಗಿ ಭಾಸವಾಗುತ್ತದೆ. ಹಾಗೆ ಅವಕಾಶವನ್ನು ಕಲ್ಪಿಸುವವರು ಅವತಾರಪುರುಷರು.

ಈ ಯುಗದ ಅವತಾರವರಿಷ್ಠರಾದ ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಅನೇಕ ತೀರ್ಥಯಾತ್ರೆಗಳನ್ನು ಮಾಡಿದ್ದಾರೆ. ಇದರಿಂದ ಸಾಧಾರಣ ಜನರಾದ ನಾವು ಏನನ್ನು ತಾನೇ ತಿಳಿದುಕೊಳ್ಳಬಹುದು? ಶ್ರೀರಾಮಕೃಷ್ಣರು ಮಥುರ ಬಾಬುವಿನ ಜೊತೆಗೆ ದೇವಘರ್, ವಾರಾಣಸಿ, ಮಥುರಾ, ಬೃಂದಾವನ ಮುಂತಾದ ಸ್ಥಳಗಳಿಗೆ ತೀರ್ಥಯಾತ್ರೆಯನ್ನು ಮಾಡಿದರು. ಈ ಸ್ಥಳಗಳಲ್ಲೆಲ್ಲಾ ಭಗವಂತನ ಸಾನ್ನಿಧ್ಯವನ್ನು ಕಂಡುಕೊಂಡರು. ವಾರಾಣಸಿಯಲ್ಲಿ ಶಿವನ ಸಾನ್ನಿಧ್ಯದ ದರ್ಶನವನ್ನು ಮಾಡಿದರು. ಬೃಂದಾವನದಲ್ಲಿ ರಾಧಾಕೃಷ್ಣರ ದರ್ಶನ ಮಾಡಿದರು. ಹೀಗೆ, ಹಿಂದಿನ ಪುರಾಣ ಐತಿಹ್ಯಗಳೆಲ್ಲ ಇಂದಿಗೂ ಸತ್ಯವಾದುದು ಎಂದು ಅವರು ತೋರಿಸಿಕೊಟ್ಟರು.



ರಾಮೇಶ್ವರ ದೇವಸ್ಥಾನದಲ್ಲಿ ಶ್ರೀಮಾತೆಯವರು

ಶ್ರೀರಾಮಕೃಷ್ಣರಿಗಿಂತಲೂ ಶ್ರೀಮಾತೆ ಶಾರದಾದೇವಿಯರೇ ಹೆಚ್ಚಿನ ತೀರ್ಥಕ್ಷೇತ್ರಗಳಿಗೆ ಭೇಟಿಕೊಟ್ಟಿದ್ದಾರೆ. ಆ ಮೂಲಕ ಯಾತ್ರೆ ಮಾಡುವವರು ಯಾವ ರೀತಿ ತೀರ್ಥಯಾತ್ರೆ ಮಾಡಬೇಕೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ, ಇವರ ಪಾದಧೂಳಿ ಆಯಾ ಕ್ಷೇತ್ರಗಳಲ್ಲಿ, ಅದರಲ್ಲೂ ದಕ್ಷಿಣ ಭಾರತದ ಮೇಲೆ ಬಿದ್ದಿದ್ದರಿಂದ, ಇಲ್ಲಿನ ನೆಲ ಪವಿತ್ರವಾಯಿತು. ಹೀಗೆ ಶ್ರೀಮಾತೆಯವರು ನಮ್ಮವರೇ ಎಂಬ ಭಾವನೆ ದಕ್ಷಿಣಭಾರತದ ಜನರ ಮಾನಸದಲ್ಲಿ ಮೂಡಿತು. ಬೆಂಗಳೂರಿನ ಬಸವನಗುಡಿ ಆಶ್ರಮದಲ್ಲಂತೂ, ಪರ್ವತವಾಸಿನಿಯೇ ಆಗಿ, ಭಕ್ತರನ್ನೆಲ್ಲ ಆಶೀರ್ವದಿಸಿದರು. ಈಗ ಆ ಸ್ಥಳವೇ ಒಂದು ಪವಿತ್ರ ತೀರ್ಥಕ್ಷೇತ್ರವಾಗಿ ಪರಿವರ್ತನೆ ಹೊಂದಿದೆ.

**ಶ್ರೀಮಾತೆಯವರ ಮೊದಲನೆಯ ತೀರ್ಥಯಾತ್ರೆ :** ಶ್ರೀಮಾತೆ ಶಾರದಾದೇವಿಯವರು ತಮ್ಮ ಜನ್ಮಸ್ಥಳವಾದ ಜಯರಾಂಬಾಟಿಯಿಂದ ದಕ್ಷಿಣೇಶ್ವರದ ಕಾಳಿ ದೇವಾಲಯದಲ್ಲಿ ವಾಸಿಸುತ್ತಿದ್ದ ಶ್ರೀರಾಮಕೃಷ್ಣರನ್ನು ಭೇಟಿಯಾಗಲು ಬಂದದ್ದೇ ಒಂದು ತೀರ್ಥಯಾತ್ರೆಯ ಸಂದರ್ಭವೆನ್ನಬಹುದು. ಪಾರ್ವತಿಯು ಶಿವನನ್ನು ಪಡೆಯಲು ಕಠಿಣವಾದ ತಪಸ್ಸನ್ನು ಮಾಡಿದಳಂತೆ. ಅದರಂತೆ, ನಂತರ ಸುದೀರ್ಘವಾದ ೧೪ ವರ್ಷಗಳ ಕಾಲ, ಶ್ರೀಮಾತೆಯವರು ಶ್ರೀರಾಮಕೃಷ್ಣರ ಸೇವೆಯಲ್ಲಿ ನಿರತರಾಗಿದ್ದರು. ಇದು ನಿಜಕ್ಕೂ ಒಂದು ಮಹಾತಪಸ್ಸೇ ಸರಿ.


ಶ್ರೀರಾಮಕೃಷ್ಣರು ತಮ್ಮ ಕಡೆಯ ದಿನಗಳನ್ನು ಕಾಶಿಪುರದ ಉದ್ಯಾನವನಗೃಹದಲ್ಲಿ ಕಳೆದರು. ಆ ಸಮಯದಲ್ಲಿ ಒಮ್ಮೆ ಅವರು ಶ್ರೀಮಾತೆಯವರಿಗೆ ಹೀಗೆ ಹೇಳಿದರು: "ಈ ಶರೀರವು ಹೋಗಲಾಗದೆ ಇದ್ದ ತೀರ್ಥಕ್ಷೇತ್ರಗಳಿಗೆ ನೀನು ಹೋಗಿಬಾ." ೧೮೮೬, ಆಗಸ್ಟ್ ೧೬ರಂದು ಶ್ರೀರಾಮಕೃಷ್ಣರ ಮಹಾಸಮಾಧಿಯಾಯಿತು. ಶ್ರೀಮಾತೆಯವರು ತಮ್ಮ ಪತಿದೇವರೂ, ಇಷ್ಟದೈವವೂ ಆಗಿದ್ದ ಪರಮಹಂಸರ ಅಗಲಿಕೆಯ ದುಃಖವನ್ನು ಪರಿಹರಿಸಿಕೊಳ್ಳಲು ತೀರ್ಥಯಾತ್ರೆಗೆ ಹೊರಟರು. ಅವರೊಡನೆ, ಸ್ವಾಮಿ ಯೋಗಾನಂದರು, ಸ್ವಾಮಿ ಅಭೇದಾನಂದರು, ಸ್ವಾಮಿ ಅದ್ಭುತಾನಂದರು, ಲಕ್ಷ್ಮೀ ದೀದಿ, ಗೋಲಾಪ್ ಮಾ, ಮಾಸ್ಟರ್ ಮಹಾಶಯರ ಧರ್ಮಪತ್ನಿ ನಿಕುಂಜದೇವಿ – ಇವರೆಲ್ಲರೂ ಇದ್ದರು. ಇವರೆಲ್ಲರೂ ಬೃಂದಾವನ ಧಾಮಕ್ಕೆ ತೆರಳಿದರು. ಮಾರ್ಗಮಧ್ಯೆ, ದೇವಘರ್‌ನಲ್ಲಿ ಒಂದು ದಿನ ತಂಗಿ, ಅಲ್ಲಿನ ಆರಾಧ್ಯದೇವತೆಯಾದ ಮಹಾದೇವನನ್ನು ದರ್ಶಿಸಿದರು. ಮಥುರಬಾಬುವಿನ ಜೊತೆಗೆ ದೇವಘರ ಯಾತ್ರೆಗೆ ಹೋದ ಸಮಯದಲ್ಲಿ, ಶ್ರೀರಾಮಕೃಷ್ಣರು ಅಲ್ಲಿನ ಕ್ಷಾಮಪೀಡಿತ ಜನರಿಗೆ ಆಹಾರ ಮತ್ತು ಬಟ್ಟೆಯನ್ನು ಹಂಚಿದ್ದು ಎಲ್ಲರಿಗೂ ತಿಳಿದ ವಿಷಯ.

ತೀರ್ಥಯಾತ್ರೆಯ ಈ ಪರಿವಾರವು ಮುಂದೆ ವಾರಾಣಸಿಗೆ ಆಗಮಿಸಿತು. ಅಲ್ಲಿ ಅವರೆಲ್ಲ ಮೂರು ದಿನಗಳ ಕಾಲ ವಾಸ್ತವ್ಯವನ್ನು ಮಾಡಿದರು. ಶ್ರೀಮಾತೆಯವರು ಭಗವಾನ್ ವಿಶ್ವನಾಥನ ದರ್ಶನ ಮಾಡಿ, ಭಾವಸಮಾಧಿಯನ್ನು ಹೊಂದಿದರು. ದೇವಾಲಯದಿಂದ ಮನೆಗೆ ಹಿಂತಿರುಗುವಾಗ, ಕಾಲಿನ ಸಪ್ಪಳವೂ ಕೇಳದ ಹಾಗೆ ಅವರು ನಿಶ್ಶಬ್ದವಾಗಿ ನಡೆಯುತ್ತಿದ್ದರು ಎಂದು ಹೇಳಲಾಗಿದೆ. ಮುಂದೆ ಶ್ರೀಮಾತೆಯವರು ಹೇಳುತ್ತಾರೆ, ಆ ಸಮಯದಲ್ಲಿ ಶ್ರೀರಾಮಕೃಷ್ಣರೇ ತಮ್ಮ ಕೈಹಿಡಿದು ಕರೆತಂದರು ಎಂಬುದಾಗಿ.

ಯಾತ್ರಾತಂಡದವರು ವಾರಾಣಸಿಯಿಂದ ಅಯೋಧ್ಯೆಗೆ ಬಂದು, ಅಲ್ಲಿ ಒಂದು ದಿನ ಇದ್ದರು. ಬಳಿಕ, ಬೃಂದಾವನಕ್ಕೆ ತೆರಳಿದರು. ರೈಲಿನಲ್ಲಿ ಹೋಗುವಾಗ, ಮಾರ್ಗಮಧ್ಯದಲ್ಲಿ ಅವರಿಗೆ ಒಂದು ದಿವ್ಯ ದರ್ಶನವಾಯಿತು. ಅದರಲ್ಲಿ ಶ್ರೀಮಾತೆಯವರು, ಶ್ರೀರಾಮಕೃಷ್ಣರು ಹಾಕಿಕೊಳ್ಳುತ್ತಿದ್ದ ಚಿನ್ನದ ತಾಯಿತವನ್ನು ತಮ್ಮ ಕೈಯಲ್ಲಿ ಕಟ್ಟಿಕೊಂಡಿದ್ದರು. ರೈಲಿನಲ್ಲಿ ಮಲಗುವ ಸಮಯದಲ್ಲಿ, ಶ್ರೀರಾಮಕೃಷ್ಣರೇ ದರ್ಶನವಿತ್ತು, "ಅದನ್ನು ಜೋಪಾನವಾಗಿ ಇಟ್ಟುಕೋ. ಯಾರಾದರೂ ಕದ್ದು ಬಿಡಬಹುದು" ಎಂದರು. ಇದನ್ನು ಆಲಿಸಿದ ಕೂಡಲೇ, ಶ್ರೀಮಾತೆಯವರು ಎದ್ದು, ತಾಯಿತವನ್ನು ಕಳಚಿ, ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟರು.

ಬೃಂದಾವನದಲ್ಲಿ ಶ್ರೀಮಾತೆಯವರಿಗೆ ಯೋಗಿನ್ ಮಾ ಎಂಬ ಶ್ರೀರಾಮಕೃಷ್ಣರ ಭಕ್ತೆಯೊಡನೆ ಭೇಟಿಯಾಯಿತು. ಶ್ರೀಮಾತೆಯವರು ಬರುವ ಮೊದಲೇ ಅವರು ಅಲ್ಲಿಗೆ ಹೋಗಿದ್ದರು.

ಬೃಂದಾವನಕ್ಕೆ ರೈಲಿನಲ್ಲಿ ಪ್ರಯಾಣ ಮಾಡುವ ಸಮಯದಲ್ಲಿ




ಯೋಗಿನ್ ಮಾಳನ್ನು ಕಂಡಕೂಡಲೇ ಅಪ್ಪಿಕೊಂಡು, ಶ್ರೀಮಾತೆಯವರು ಬಿಕ್ಕಿಬಿಕ್ಕಿ ಅಳತೊಡಗಿದರು. ಇಬ್ಬರಿಗೂ ಶ್ರೀರಾಮಕೃಷ್ಣರ ಅಗಲಿಕೆಯ ತಾಪ ಉಂಟಾಗಿತ್ತು. ಜೊತೆಯಲ್ಲಿದ್ದವರು ಇವರನ್ನು ಸಮಾಧಾನಪಡಿಸಲು ಬಹುವಾಗಿ ಪ್ರಯತ್ನಿಸಿದರು. ಶ್ರೀರಾಮಕೃಷ್ಣರನ್ನು ಅಗಲಿದ ದುಃಖವು ಶ್ರೀಮಾತೆಯವರಿಗೆ, ಶ್ರೀಕೃಷ್ಣನ ಅಗಲಿಕೆಯನ್ನು ಅನುಭವಿಸುವಾಗ ಶ್ರೀರಾಧೆ ಪಟ್ಟ ವಿರಹವನ್ನು ಪ್ರತಿಬಿಂಬಿಸುವಂತಿತ್ತು. ರಾಧೆಯ ಪ್ರೇಮಭಕ್ತಿಯ ಪ್ರತಿಯೊಂದು ಅಶ್ರುಬಿಂದುವೂ ಇಂದಿಗೂ ಬೃಂದಾವನದಲ್ಲಿ ಗೋಚರವಾಗುವಂತಿದೆ. ಆಗಿನ ದಿನಗಳಲ್ಲಿ ಕಾಣಬರುತ್ತಿದ್ದ, ಶ್ರೀಮಾತೆಯವರ ದುಃಖ ಕಾತರಗಳಿಂದ ಕೂಡಿದ ಮನೋಭಾವವು, ಶ್ರೀರಾಧೆಯ ವಿರಹ ಮನೋಭಾವವನ್ನು ಹೋಲುವಂತಿತ್ತು. ಆದರೆ ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಆಗಾಗ್ಗೆ ದರ್ಶನವನ್ನು ನೀಡಿ, ಅವರನ್ನು ಸಾಂತ್ವನಗೊಳಿಸುತ್ತಿದ್ದರು.

ಶ್ರೀಮಾತೆಯವರು ಬೃಂದಾವನದಲ್ಲಿದ್ದಾಗ ಅನೇಕ ಮಂದಿರಗಳನ್ನು ಸಂದರ್ಶಿಸಿದರು. ಅವುಗಳಲ್ಲಿ ರಾಧಾರಮಣನ ದೇವಸ್ಥಾನವೂ ಒಂದು. ನವಗೋಪಾಲ ಘೋಷ್ ಶ್ರೀರಾಮಕೃಷ್ಣರ ನಿಕಟ ಭಕ್ತ. ಆತನ ಹೆಂಡತಿ ನಿಸ್ತಾರಣಿ ದೇವಿಯೂ ಭಕ್ತೆಯೇ. ಆಕೆ ಅಲ್ಲಿನ ದೇವಸ್ಥಾನದಲ್ಲಿ, ದೇವಿಗೆ ಗಾಳಿ ಬೀಸುತ್ತಿರುವಂತೆ ಶ್ರೀಮಾತೆಯವರಿಗೆ ದರ್ಶನವಾಯಿತು. ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ಯೋಗಾನಂದರಿಗೆ, ತಮ್ಮ ಗುರುಗಳಿಂದ ಇನ್ನೂ ಮಂತ್ರದೀಕ್ಷೆ ಆಗಿರಲಿಲ್ಲ.

ಶ್ರೀರಾಮಕೃಷ್ಣರ ಆದೇಶದ ಮೇರೆಗೆ ಶ್ರೀಮಾತೆಯವರೇ ಅವರಿಗೆ ಬೃಂದಾವನದಲ್ಲಿ ಮಂತ್ರದೀಕ್ಷೆಯನ್ನು ಕೊಟ್ಟರು. ಬೃಂದಾವನದಲ್ಲಿ ಸುದೀರ್ಘಕಾಲದವರೆಗೆ ಪರಮಹಂಸರ ಭಾವದಲ್ಲಿಯೇ ಶ್ರೀಮಾತೆಯವರು ಮುಳುಗಿಹೋಗಿರುತ್ತಿದ್ದರು. ಅವರ ಆಚಾರ, ವಿಚಾರ ಮತ್ತು ನಡವಳಿಕೆಗಳು ಶ್ರೀರಾಮಕೃಷ್ಣರು ಮಾಡುತ್ತಿದ್ದಂತೆಯೇ ಇರುತ್ತಿದ್ದವು. ಸ್ವಾಮಿ ಅಭೇದಾನಂದರು ತಮ್ಮ 'ಶಾರದಾದೇವಿ ಸ್ತೋತ್ರ'ದಲ್ಲಿ ಬರೆದಿರುವಂತೆ ಶ್ರೀಮಾತೆಯವರು, 'ರಾಮಕೃಷ್ಣ ಗತಪ್ರಾಣರು' ಮತ್ತು 'ತದ್ಭಾವ ರಂಜಿತಾಕಾರರು' ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಬೃಂದಾವನದಲ್ಲಿ ಇರುವಾಗಲೇ ಶ್ರೀಮಾತೆಯವರು, ಜಯಪುರ, ಪುಷ್ಕರ, ಹರಿದ್ವಾರ ಮೊದಲಾದ ತೀರ್ಥಕ್ಷೇತ್ರಗಳಿಗೂ ಹೋಗಿ ಬಂದರು. ಈ ರೀತಿಯಲ್ಲಿ ಒಂದು ವರ್ಷ ಕಾಲ ಕಳೆದು ಕೊಲ್ಕತಾಗೆ ಹಿಂತಿರುಗಿಬಂದರು.

**ಗಯಾಕ್ಷೇತ್ರದ ದರ್ಶನ :** ಶ್ರೀಮಾತೆಯವರು ೧೮೮೮ರ ಏಪ್ರಿಲ್ ತಿಂಗಳಿನಲ್ಲಿ, ಸ್ವಾಮಿ ಅದ್ವೈತಾನಂದರೊಡನೆ, ಗಯಾಕ್ಷೇತ್ರವನ್ನು ಸಂದರ್ಶಿಸಿದರು. ಶ್ರೀರಾಮಕೃಷ್ಣರು ತಮ್ಮ ತಾಯಿಯ ಕಾಲಾನಂತರ ಶ್ರೀಮಾತೆಯವರಿಗೆ, "ನೀನು ಗಯಾಕ್ಷೇತ್ರಕ್ಕೆ ಹೋಗಿ ಶ್ರಾದ್ಧ ಮಾಡು" ಎಂದು ಹೇಳಿದ್ದರು. ಶ್ರೀಮಾತೆ ಈ ರೀತಿಯಲ್ಲಿ ಅದನ್ನು ಪರಿಪಾಲಿಸಿದರು. ಆ ಸಮಯದಲ್ಲಿಯೇ ಹತ್ತಿರದಲ್ಲಿದ್ದ ಬೋಧಗಯಾಕ್ಕೆ ಕೂಡ ಹೋಗಿಬಂದರು. ಅಲ್ಲಿದ್ದ ಬೌದ್ಧಸಂನ್ಯಾಸಿಗಳು ವಾಸಿಸುತ್ತಿದ್ದ ದೊಡ್ಡ ದೊಡ್ಡ ವಿಹಾರಗಳನ್ನು ನೋಡಿದರು. ಅವರಿಗೆ ಇದ್ದ ಸುವ್ಯವಸ್ಥೆಯನ್ನು ಕಂಡು, ಶ್ರೀರಾಮಕೃಷ್ಣರ ಶಿಷ್ಯರಾದ ತಮ್ಮ ಮಕ್ಕಳ ಕಷ್ಟಜೀವನವನ್ನು ನೆನೆದು ಪರಿತಾಪಪಟ್ಟರು. ಅವರಿಗೆ ಸರಿಯಾದ ನೆಲೆ ದೊರಕಿಸಿಕೊಡುವಂತೆ ಕಾತರದಿಂದ ಶ್ರೀರಾಮಕೃಷ್ಣರಲ್ಲಿ ಹೀಗೆ ಪ್ರಾರ್ಥಿಸಿದರು: "ನಿಮ್ಮ ಹೆಸರನ್ನು ಹೇಳಿಕೊಂಡು, ಎಲ್ಲವನ್ನೂ ತೊರೆದು ಬಂದವರು, ಕಾಲುಚಾಚಲು ಸ್ವಲ್ಪ ಸ್ಥಳ ಮತ್ತು ಒಂದು ತುತ್ತು ಅನ್ನಕ್ಕಾಗಿ, ಮನೆಮನೆಗೆ ಅಲೆಯುವಂತೆ ಮಾಡಬೇಡಿ." ಇದರ ಪರಿಣಾಮವಾಗಿಯೇ ಇಂದು ಬೃಹದಾಕಾರವಾಗಿ ಬೆಳೆದಿರುವ ಶ್ರೀರಾಮಕೃಷ್ಣ ಆಶ್ರಮಗಳ ಸ್ಥಾಪನೆಯಾಗಿದೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

**ಪುರಿ ಧಾಮ ಯಾತ್ರೆ:** ಅದೇ ವರ್ಷದ ಕೊನೆಯಲ್ಲಿ ಶ್ರೀಮಾತೆಯವರು ಪುರಿ ಕ್ಷೇತ್ರದ ಅಧಿದೇವತೆಯಾದ ಜಗನ್ನಾಥನ ದೇವಾಲಯದ ದರ್ಶನಕ್ಕಾಗಿ ಹೊರಟರು. ಇವರೊಂದಿಗೆ, ಯೋಗಿನ್ ಮಾ, ಸ್ವಾಮಿ ಬ್ರಹ್ಮಾನಂದ, ಸ್ವಾಮಿ ಯೋಗಾನಂದ ಮತ್ತು ಸ್ವಾಮಿ ಶಾರದಾನಂದರು ಕೂಡ ಇದ್ದರು. ಇವರೆಲ್ಲ ಅಲ್ಲಿದ್ದ ಬಲರಾಮ ಬೋಸನ ಮನೆಯಲ್ಲಿ ತಂಗಿದ್ದರು. ಅಲ್ಲಿದ್ದ ಬಲರಾಮನ ಸಹೋದರರು ಬಹಳ ಸುಪ್ರಸಿದ್ಧ ವಕೀಲರು. ಆದ್ದರಿಂದ ಎಲ್ಲರೂ ಅವರಿಗೆ ಬಹಳ ಗೌರವ ಮತ್ತು ಮರ್ಯಾದೆಗಳನ್ನು ನೀಡುತ್ತಿದ್ದರು. ಅಲ್ಲಿನ ದೇವಾಲಯದ ಮುಖ್ಯ ಪುರೋಹಿತರಾದ ಗೋವಿಂದ ಸಿಂಗಾರಿ ಅವರು



ಬುದ್ಧಗಯೆಯಲ್ಲಿ
ಶ್ರೀರಾಮಕೃಷ್ಣರಿಗೆ
ಪ್ರಾರ್ಥಿಸುತ್ತಿರುವುದು

ಶ್ರೀಮಾತೆಯವರನ್ನು ಪಲ್ಲಕ್ಕಿಯಲ್ಲಿ ಬಹಳ ವಿಜೃಂಭಣೆಯಿಂದ ಕರೆದೊಯ್ಯಲು ಇಚ್ಛಿಸಿದರು. ಆದರೆ ಶ್ರೀಮಾತೆಯವರು, "ಇಲ್ಲ, ದೀನದಲಿತರಂತೆ ನಿನ್ನ ಹಿಂದೆ ನಡೆದುಕೊಂಡು ಬಂದು ನಾನು ಜಗನ್ನಾಥನನ್ನು ದರ್ಶಿಸುತ್ತೇನೆ" ಎಂದು ಹೇಳಿದರು. ತಮ್ಮ ಜೀವಿತಕಾಲದಲ್ಲಿ ಶ್ರೀರಾಮಕೃಷ್ಣರು ಎಂದೂ ಪುರಿಕ್ಷೇತ್ರಕ್ಕೆ ಬಂದಿರಲಿಲ್ಲ. ಅದಕ್ಕಾಗಿ ಶ್ರೀಮಾತೆಯವರು ಶ್ರೀಮಾತೆಯವರ ಛಾಯಾಚಿತ್ರವನ್ನು ತೆಗೆದುಕೊಂಡು ಹೋಗಿ, ಜಗನ್ನಾಥನ ಮೂರ್ತಿಗೆ ತೋರಿಸಿದರು. ಎರಡು ತಿಂಗಳ ಕಾಲ ಅಲ್ಲಿ ಆನಂದ ದಿಂದ ಕಳೆದು, ಅವರೆಲ್ಲರೂ ಕೊಲ್ಕತಾಗೆ ಹಿಂತಿರುಗಿದರು.

**ಇತರ ಯಾತ್ರೆಗಳು:** ೧೮೯೪ರಲ್ಲಿ ಶ್ರೀಮಾತೆ ಶಾರದಾದೇವಿಯವರು ಕಾಶಿ ಮತ್ತು ಬೃಂದಾವನಗಳಿಗೆ ತಮ್ಮ ತಾಯಿ

ಮತ್ತು ಸಹೋದರರೊಡನೆ ಯಾತ್ರೆ ಹೋದರು. ಹಾಗೆಯೇ ೧೯೦೪ರಲ್ಲಿ ಕುಟುಂಬದ ಸದಸ್ಯರೊಡನೆ ಪುರಿಕ್ಷೇತ್ರಕ್ಕೆ ಹೋದರು. ಅಲ್ಲಿರುವಷ್ಟು ದಿನವೂ ಅವರು ಸಮುದ್ರಸ್ನಾನ ಮಾಡಿ, ಜಗನ್ನಾಥನಿಗೆ ಪ್ರದಕ್ಷಿಣೆ ಹಾಕಿ ಬರುತ್ತಿದ್ದರು. ೧೯೧೦ ರಲ್ಲಿ ಶ್ರೀಮಾತೆಯವರು, ಒರಿಸ್ಸಾ ಪ್ರಾಂತ್ಯದ ಕೊಠಾರ್ ಎಂಬ ಊರಿಗೆ ಹೋದರು. ಅಲ್ಲಿ ಬಲರಾಮ ಬಸುವಿಗೆ ಸೇರಿದ ದೊಡ್ಡದೊಂದು ತೋಟ ಮತ್ತು ವಸತಿಗೃಹವಿತ್ತು. ಅಲ್ಲಿ ಎರಡು ತಿಂಗಳ ಕಾಲ ಇದ್ದು, ದಕ್ಷಿಣಭಾರತದ ಪ್ರವಾಸಕ್ಕಾಗಿ ಹೊರಟರು.

**ದಕ್ಷಿಣ ಭಾರತದಲ್ಲಿ ತೀರ್ಥಯಾತ್ರೆ** : ದಕ್ಷಿಣ ಭಾರತದಲ್ಲಿ ಮದ್ರಾಸಿನಿಂದ ಹಿಡಿದು ಎಲ್ಲ ಕಡೆಯೂ ಪೂಜ್ಯ ಸ್ವಾಮಿ ರಾಮಕೃಷ್ಣಾನಂದಜಿ ಅವರು ಶ್ರೀಮಾತೆಯವರು ಮತ್ತು ಅವರ ಪರಿವಾರದವರಿಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದರು. ಶ್ರೀಮಾತೆಯವರು ಮದ್ರಾಸಿನಲ್ಲಿ ಒಂದು ತಿಂಗಳ ಕಾಲ ಇದ್ದರು. ಹಲವಾರು ಭಕ್ತರಿಗೆ ಮಂತ್ರದೀಕ್ಷೆಯನ್ನು ದಯಪಾಲಿಸಿದರು. ಆಗ ಅವರಿಗೆ ಭಾಷೆಯ ತೊಡಕು ಬರಲೇ ಇಲ್ಲ. ಶ್ರೀಮಾತೆಯವರ ದರ್ಶನವೇ ಭಕ್ತಾದಿಗಳಿಗೆ ಅಪಾರ ಆನಂದವನ್ನು ನೀಡುತ್ತಿತ್ತು.

ಅನಂತರ ಶ್ರೀಮಾತೆಯವರು ಮಧುರೈ ನಗರಕ್ಕೆ ಹೋಗಿ, ಅಲ್ಲಿನ ಮೀನಾಕ್ಷಿ ದೇವಾಲಯವನ್ನು ಸಂದರ್ಶಿಸಿದರು. ಅಲ್ಲಿಂದ ರಾಮೇಶ್ವರಕ್ಕೆ ತೆರಳಿದರು. ಅಲ್ಲಿ ಸ್ವಾಮಿ ವಿವೇಕಾನಂದರ ಶಿಷ್ಯನಾದ ರಾಮನಾಡಿನ ರಾಜ ಭಾಸ್ಕರ ಸೇತುಪತಿಯು ಶ್ರೀಮಾತೆಯವರ ಪರಿವಾರದವರಿಗೆ ಎಲ್ಲ ಅನುಕೂಲತೆಗಳನ್ನೂ ಮಾಡಿಕೊಟ್ಟಿದ್ದನು. ರಾಜನ ಆದೇಶದಂತೆ, ಶ್ರೀಮಾತೆಯವರಿಗೆ ಗರ್ಭಗುಡಿಯ ಒಳಗೆ ಪ್ರವೇಶ ನೀಡಲಾಯಿತು. ಹಾಗೆಯೇ ರಾಜನು ೧೦೮ ಚಿನ್ನದ ಬಿಲ್ವಪತ್ರೆಗಳಿಂದ ಶಿವಲಿಂಗವನ್ನು ಅರ್ಚಿಸುವ ಅವಕಾಶವನ್ನೂ ಕಲ್ಪಿಸಿದನು. ಹಾಗೆಯೇ ಲಿಂಗದ ಮೇಲಿನ ಕವಚವನ್ನು ತೆರೆದು, ಶ್ರೀರಾಮಚಂದ್ರನು ಪ್ರತಿಷ್ಠಾಪಿಸಿದ್ದ ಮೂಲ ಮರಳಿನ ಲಿಂಗವನ್ನು ಶ್ರೀಮಾತೆಯವರಿಗೆ ತೋರಿಸಲಾಯಿತು. ಅದನ್ನು ನೋಡಿದಾಗ, "ಇದು ಹಾಗೆಯೇ ಇದೆ" ಎಂದು ಶ್ರೀಮಾತೆ ಉದ್ಗರಿಸಿದರು. ತಮ್ಮ ಹಿಂದಿನ ರೂಪವಾದ ಸೀತಾದೇವಿಯ ಜನ್ಮದ ಸ್ಮರಣೆ ಆ ಸಮಯದಲ್ಲಿ ಅವರಿಗೆ ಬಂದಿತು ಎಂದು ಭಕ್ತರು ನಂಬುತ್ತಾರೆ.

ಅಲ್ಲಿಂದ ಶ್ರೀಮಾತೆಯವರು ಬೆಂಗಳೂರಿಗೆ ಬಂದರು. ಈಗ ರಾಮಕೃಷ್ಣ ಆಶ್ರಮವಿರುವ ಜಾಗದಲ್ಲಿಯೇ ಉಳಿದುಕೊಂಡರು. ಒಂದು ದಿನ ಆಶ್ರಮದ ಹಿಂಭಾಗದಲ್ಲಿದ್ದ ಕಲ್ಲುಗುಡ್ಡದ ಮೇಲೆ ಹತ್ತಿ, ಕುಳಿತು ಧ್ಯಾನ ಮಾಡಿದರು. ಇದನ್ನು ಕೇಳಿತಿಳಿದ ಸ್ವಾಮಿ ರಾಮಕೃಷ್ಣಾನಂದರು ದೇವೀಸ್ತೋತ್ರಗಳನ್ನು ಹೇಳಿಕೊಂಡು, ಅವರಿಗೆ ಪ್ರಣಾಮ ಮಾಡಿದರು. "ಶ್ರೀಮಾತೆಯವರು ಈಗ ಪರ್ವತವಾಸಿನಿಯಾಗಿಬಿಟ್ಟಿದ್ದಾರೆ" ಎಂದು ಉದ್ಗರಿಸಿದರು.

ಬೆಂಗಳೂರಿನಲ್ಲಿ ಯಾವುದೇ ಪ್ರಚಾರ ಇಲ್ಲದೆಯೇ, ಶ್ರೀಮಾತೆಯವರನ್ನು ನೋಡಲು ನೂರಾರು ಜನರು ಸೇರುತ್ತಿದ್ದರು. ಅವರೆಲ್ಲ ಶ್ರೀಮಾತೆಯವರ ಮೇಲೆ ಹೂವಿನ ಮಳೆಯನ್ನೇ ಸುರಿಸುತ್ತಿದ್ದರು. ಇಲ್ಲಿನ ಜನರ ಭಕ್ತಿಯನ್ನು ನೋಡಿ ಶ್ರೀಮಾತೆಯವರು ಬಹಳ ಆನಂದಪಟ್ಟರು. ಅನಂತರ ಅವರು ಮದರಾಸಿಗೆ ಹಿಂತಿರುಗಿ, ಕೆಲಕಾಲದ ನಂತರ ಕೊಲ್ಕತಾಗೆ ಹಿಂತಿರುಗಿದರು. ಹೀಗೆ ದಕ್ಷಿಣಭಾರತದ ಹಲವಾರು ಸ್ಥಳಗಳನ್ನು ಶ್ರೀಮಾತೆಯವರು ತಮ್ಮ ಪಾದಧೂಳಿಯಿಂದ ಪವಿತ್ರಗೊಳಿಸಿದರು. ಈ ಸ್ಥಾನಗಳೆಲ್ಲವೂ ತೀರ್ಥಕ್ಷೇತ್ರಗಳೇ ಎಂದರೆ ಅತಿಶಯೋಕ್ತಿಯಾಗಲಾರದು.

**ಕಟ್ಟಕಡೆಯ ಯಾತ್ರೆ** : ತಮ್ಮ ಜೀವಿತಕಾಲದಲ್ಲಿ ಶ್ರೀಮಾತೆಯವರು ಕೈಗೊಂಡ ಕಟ್ಟಕಡೆಯ ತೀರ್ಥಯಾತ್ರೆಯೆಂದರೆ, ೧೯೧೨ರಲ್ಲಿ ಮಾಡಿದ ಕಾಶೀಯಾತ್ರೆ. ಆ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಶ್ರೀಮಾತೆ ಕಾಶಿಗೆ ಆಗಮಿಸಿದರು. ಈಗ ಅಲ್ಲಿ 'ರಾಮಕೃಷ್ಣ ಸೇವಾಶ್ರಮ' ಎಂಬ ವೈದ್ಯಕೀಯ ಸೇವಾಕೇಂದ್ರ ಸ್ಥಾಪನೆಯಾಗಿತ್ತು. ಅದಕ್ಕೆ ಹತ್ತಿರವೇ ಇದ್ದ 'ಲಕ್ಷ್ಮೀನಿವಾಸ' ಎಂಬ ಮನೆಯಲ್ಲಿ ಶ್ರೀಮಾತೆಯವರು ಬಿಡಾರ ಹೂಡಿದರು. ಅವರ ಸಂಗಡ ಭಾನು ಅತ್ತೆ, ನಿಕುಂಜ ದೇವಿ, ಗೊಲಾಪ್ ಮಾ, ಮಾಸ್ಟರ್ ಮಹಾಶಯ ಮತ್ತಿತರರು ಇದ್ದರು.

ಶ್ರೀಮಾತೆಯವರು ಒಂದು ದಿನ ಸೇವಾಶ್ರಮಕ್ಕೆ ಭೇಟಿ ಕೊಟ್ಟು ಅಲ್ಲಿನ ಸೇವಾಚಟುವಟಿಕೆಗಳನ್ನು ವೀಕ್ಷಿಸಿ, ಬಹಳ ಸಂತೋಷಪಟ್ಟರು. "ಶ್ರೀರಾಮಕೃಷ್ಣರೇ ಅಲ್ಲಿ ನೆಲೆಸಿರುವುದನ್ನು ಪ್ರತ್ಯಕ್ಷವಾಗಿ ಕಂಡೆ" ಎಂದು ಉದ್ಗಾರವೆತ್ತಿದರು. ಸೇವಾಶ್ರಮಕ್ಕೆ ಹತ್ತು ರೂಪಾಯಿಗಳ ಕಾಣಿಕೆ ನೀಡಿದರು. ಅವರು ನೀಡಿದ ನೋಟನ್ನು ಇಂದಿಗೂ ಸಂರಕ್ಷಿಸಿ ಇಡಲಾಗಿದೆ. ಆ ವರ್ಷ, ಶ್ರೀಮಾತೆಯವರ ಜನ್ಮದಿನವನ್ನು ಪಕ್ಕದ ರಾಮಕೃಷ್ಣ ಅದ್ವೈತ ಆಶ್ರಮದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. "(ಅಂದಿನ ದಿನ) ಶ್ರೀಮಾತೆಯವರ ಸಾನ್ನಿಧ್ಯದಿಂದಾಗಿ ಆನಂದದ ಲಹರಿಯೇ ಹರಿದಿತ್ತು" ಎಂದು ಸ್ವಾಮಿ ತುರೀಯಾನಂದರು ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ.

ಹೀಗೆ ಶ್ರೀಮಾತೆಯವರು ಅನೇಕ ತೀರ್ಥಕ್ಷೇತ್ರಗಳನ್ನು ತಮ್ಮ ಭೇಟಿಯಿಂದ ಇನ್ನೂ ಪವಿತ್ರಗೊಳಿಸಿದ್ದಾರೆ. ಇದಲ್ಲದೆ, ನಾವು ತೀರ್ಥಕ್ಷೇತ್ರಗಳಿಗೆ ಹೋದಾಗ ಯಾವ ರೀತಿ ನಡೆದುಕೊಳ್ಳಬೇಕು ಎಂಬುದರ ಬಗ್ಗೆಯೂ ನಮಗೆ ಮಾರ್ಗದರ್ಶನ ಮಾಡಿದ್ದಾರೆ. ಶ್ರೀಮಾತೆಯವರ ನೆನಪುಗಳಿಂದ ಮನಸ್ಸನ್ನು ಶುದ್ಧಿ ಮಾಡಿಕೊಂಡು, ಆಯಾ ತೀರ್ಥಕ್ಷೇತ್ರಗಳನ್ನು ನಾವು ಸಂದರ್ಶಿಸಿದರೆ, ನಮಗೆ ಒಂದು ಬಗೆಯ ಆನಂದ ಹಾಗೂ ಧನ್ಯತೆಯ ಭಾವ ಉಂಟಾಗುತ್ತದೆ. ಇದು ನಮ್ಮೆಲ್ಲರಿಗೆ ಶ್ರೀಮಾತೆಯವರು ಈಗಲೂ ಹರಿಸುತ್ತಿರುವ ಪ್ರೀತಿ ಮತ್ತು ಆಶೀರ್ವಾದಗಳೇ ಅಲ್ಲವೇನು?!

*